# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಲೋಕ್/ಎಂವೈಎಸ್/2373/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು,
ದಿನಾಂಕ: 03/01/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ (1) ಶ್ರೀಮತಿ ವಸಂತಿ ತಂದೆ ಸಂಕಪ್ಪ ನಾಯ್ಕ, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕುಟ್ರುಪ್ಪಾಡಿ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ಹಾಲಿ ಮುತ್ತೂರು ಗ್ರಾಮ ಪಂಚಾಯತ್, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (2) ಶ್ರೀಮತಿ ಜಾನಕಿ ಕೋಂ ಸುಂದರ ಗೌಡ, ಅಧ್ಯಕ್ಷರು, ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ನಿರೀಕ್ಷರು, ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಒಂದನೇ ಎದುರುದಾರರಾದ ಶ್ರೀಮತಿ ವಸಂತಿ ತಂದೆ ಸಂಕಪ್ಪ ನಾಯ್ಕ, ಕಾರ್ಯದರ್ಶಿಗಳು, ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕುಟ್ರುಪ್ಪಾಡಿ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ಹಾಲಿ ಮುತ್ತೂರು ಗ್ರಾಮ ಪಂಚಾಯತ್, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಎರಡನೇ ಎದುರುದಾರರಾದ ಶ್ರೀಮತಿ ಜಾನಕಿ ಕೋಂ ಸುಂದರ ಗೌಡ, ಅಧ್ಯಕ್ಷರು, ಕುಟ್ಟುಪ್ಪಾಡಿ ಗ್ರಾಮ ಪಂಚಾಯತ್ ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ದೂರುದಾರರಾದ ಶ್ರೀ ಕ್ಷೇವಿಯರ್ ಬೇಬಿ ತಂದೆ ಪೌಲೋಸ್, ವಾಸ: ಅಲ್ಲಾಮೆ ಮನೆ, ಕುಟ್ರುಪ್ಪಾಡಿ ಗ್ರಾಮ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಎಂಬುವವರು ಭೇಟಿ ಮಾಡಿದಾಗ ಎದುರುದಾರರು ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಡಿಯಲ್ಲಿ ಘನತ್ಯಾಜ್ಯ ವಿಲೇವಾರಿಗಾಗಿ ಫಲಾನುಭವಿಗಳಿಗೆ ನೀಡಲು ಕಾಂಪೋಸ್ಟ್ ಪೈಪ್ ಖರೀದಿಗಾಗಿ ಕಡಿಮೆ ಬೆಲೆ ಎಂದು ತಾವೇ ಸೃಷ್ಟಿಸಿದ ಹೆಚ್ಚಿನ ಬೆಲೆಯ ನಕಲಿ ಕೊಟೇಷನ್‌ಗಳನ್ನು ತಯಾರಿಸಿ ಹೆಚ್ಚಿನ ಬೆಲೆಗೆ ಪಿ.ಜಿ. ಟ್ರೇಡರ್ಸ್ ಎಂಬ

ತೆಂಗಿನ ಕಾಯಿ ಅಡಿಕೆ ಮಾರಾಟದ ಅಂಗಡಿಯ ಹೆಸರಿನಲ್ಲಿ ಓಪನ್ ಚೆಕ್ ಮೂಲಕ ಪಡೆದುಕೊಂಡು ತನ್ನ ಸ್ವಂತಕ್ಕೆ ಅಕ್ರಮ ಲಾಭಕ್ಕಾಗಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಳ್ಳಲಾಗಿದೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:-</u> 1 ಮತ್ತು 2ನೇ ಎದುರುದಾರರು ಸೇವಾ ಅವಧಿಯಲ್ಲಿ ಉಸ್ತುವಾರಿಯಲ್ಲಿದ್ದ ಪುತ್ತೂರು ತಾಲ್ಲೂಕಿನ ಕುಟ್ರುಪ್ಪಾಡಿ ಗ್ರಾಮ ಪಂಚಾಯತಿಯ 2015-16 ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಡಿಯಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಫಲಾನುಭವಿಗಳಿಗೆ ನೀಡಲು ಕಾಂಪೋಸ್ಟ್ ಪೈಪ್ ಖರೀದಿ ವ್ಯವಹಾರದಲ್ಲಿ ನಕಲಿ ಕೊಟೇಷನ್‌ಗಳನ್ನು ತಯಾರಿಸಿ ಸಿಮೆಂಟ್ ಪೈಪ್‌ಗಳ ದರ 390/- ರೂ. ನಂತೆ ಕಾಂಪೋಸ್ಟ್ ಪೈಪ್‌ಗಳನ್ನು ತೆಂಗಿನಕಾಯಿ, ಅಡಿಕೆ ಮಾರಾಟದ ಅಂಗಡಿಯ ಹೆಸರಿನಲ್ಲಿ, ಓಪನ್ ಚೆಕ್ ಮೂಲಕ ಹಣ ಪಡೆದು ತಮ್ಮ ಸ್ವಂತಕ್ಕೆ ಉಪಯೋಗಿಸಿರುತ್ತಾರೆ ಹಾಗೂ ಸರ್ಕಾರದ ಹಣ ಅಕ್ರಮ ಲಾಭಕ್ಕಾಗಿ ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ಅಪರಾಧಿಕ ನಂಬಿಕೆ ದ್ರೋಹ ಎಸಗಿದ ಬಗ್ಗೆ ದೂರನ್ನು ದಿನಾಂಕ 03/07/2017 ರಂದು ನೀಡಿರುತ್ತಾರೆ. ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಅಪರಾಧ ಸಂಖ್ಯೆ 07/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ಈ ಪ್ರಕರಣದ ತನಿಖೆಯನ್ನು ಪೂರೈಸಿದಾಗ 2015-16 ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಲ್ಲಿ ಮಂಜೂರಾದ ರೂ. 4 ಲಕ್ಷದಲ್ಲಿ ಉಳಿಕೆಯಾದ ರೂ. 79,600/- ಗಳಿಗೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿನಿಂದ ದಿನಾಂಕ 13/11/2015 ರಂದು ಅನುಮೋದನೆಗೊಂಡು ಒಟ್ಟು 204 ಕಾಂಪೋಸ್ಟ್ ಪೈಪ್ ಖರೀದಿಗೆ ಮಂಜೂರಾತಿ ದೊರೆತಿರುತ್ತದೆ. ಈ ಬಗ್ಗೆ ದಿನಾಂಕ 17/11/2015 ರಂದು ಕುಟ್ರುಪ್ಪಾಡಿ ಗ್ರಾಮ ಪಂಚಾತಯತ್‌ನ ಸಾಮಾನ್ಯ ಸಭೆಯು ನಿರ್ಣಯ ಕೈಗೊಂಡಿರುತ್ತದೆ. ಕುಟ್ರುಪ್ಪಾಡಿ ಗ್ರಾಮ ಪಂಚಾಯತ್‌ನ ನಿಧಿ-1 ರಲ್ಲಿ ಪೈಪ್ ಕಾಂಪೋಸ್ಟ್ ಬಗ್ಗೆ ರೂ. 9,350/- ಕುಟ್ರುಪ್ಪಾಡಿ ಗ್ರಾಮ ಪಂಚಾಯತ್‌ನ ಸ್ವಂತ

ಆದಾಯದಲ್ಲಿ ರೂ. 7,625/- ಮತ್ತು ರೂ. 43,047/- ಮತ್ತು ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಲ್ಲಿ ಉಳಿಕೆಯಾದ ರೂ. 79,600/- ಹೀಗೆ ಒಟ್ಟು ರೂ. 1,39,622/- ಮೊತ್ತಕ್ಕೆ 2015-16 ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಡಿಯಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಫಲಾನುಭವಿಗಳಿಗೆ ನೀಡಲು ಕಾಂಪೋಸ್ಟ್ ಪೈಪ್ ಖರೀದಿಗಾಗಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುತ್ತದೆ. 2015-16 ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಫಲಾನುಭವಿಗಳಿಗೆ ಕಾಂಪೋಸ್ಟ್ ಪೈಪ್‌ಗಳನ್ನು ಕಡಿಮೆ ಮೊತ್ತವನ್ನು ನಮೂದಿಸಿರುವ ಪಿ.ಜಿ. ಟ್ರೇಡರ್ಸ್, ಕುವೆಂಪು ನಗರ, ಮೈಸೂರು ಮತ್ತು ಸುಂದ್ರು ಮಾಕೇಟಿಂಗ್, ಕುವೆಂಪು ನಗರ, ಮೈಸೂರು ಎಂಬ ಹೆಸರಿನ ನಕಲಿ ಕೊಟೇಷನ್‌ಗಳನ್ನು ಲ್ಯಾಪ್‌ಟಾಪ್‌ನಲ್ಲಿ ತಯಾರಿಸಿದ್ದು ಇರುತ್ತದೆ. ಶ್ರೀ ಚೇತನ್ ಕುಮಾರ ಇವರ ಪಿ.ಜಿ. ಟ್ರೇಡರ್ಸ್ ಎಂಬ ತೆಂಗಿನಕಾಯಿ ಅಡಿಕೆ ಮಾರಾಟದ ಹೆಸರಿನಲ್ಲಿ ನಕಲಿ ಸಂಸ್ಥೆ ಎಂದು ತಿಳಿದಿದ್ದರೂ ಕೊಟೇಷನ್ ಹಾಗೂ ಬಿಲ್‌ಗಳನ್ನು ಪಡೆದುಕೊಂಡಿದ್ದಾರೆ. ಸದರಿ ಪಿ.ಜಿ. ಟ್ರೇಡರ್ಸ್ ಮತ್ತು ಸುಂದ್ರು ಮಾರ್ಕೆಟಿಂಗ್ ಎಂಬ ಹೆಸರಿನಲ್ಲಿ ನೀಡಲಾದ ಕೊಟೇಷನ್ ಮತ್ತು ಬಿಲ್‌ಗಳು ಲ್ಯಾಪ್ ಟಾಪ್ ನಲ್ಲಿ ಸೃಷ್ಟಿಸಿದ ನಕಲಿ ಕೊಟೇಶನ್ ಮತ್ತು ಬಿಲ್ಲುಗಳಾಗಿರುತ್ತದೆ. ಪಿ.ಜಿ. ಟ್ರೇಡರ್ಸ್, ಕುವೆಂಪು ನಗರ ಮೈಸೂರು ರವರಿಗೆ ಸಿಮೆಂಟ್ ಪೈಪ್‌ಗಳನ್ನು ಖರೀದಿಸುವ ಬಗ್ಗೆ ವರ್ಕ್ ಆರ್ಡರನ್ನು ನೀಡಿ ಪೈಪ್‌ನ್ನು ಖರೀದಿಸಬೇಕಾಗಿತ್ತು. ಆದರೆ ವರ್ಕ್ ಆರ್ಡರ್ ನೀಡಿ ಪೈಪ್‌ಗಳನ್ನು ಖರೀದಿಸಿರುವುದಿಲ್ಲ. ನಿರ್ಮಲ ಗ್ರಾಮ ಪುರಸ್ಕಾರದ ಘನ ತ್ಯಾಜ್ಯ ವಿಲೇವಾರಿ ಕ್ರಿಯಾ ಯೋಜನೆಯಲ್ಲಿ ಒಟ್ಟು 357 ಕಾಂಪೋಸ್ಟ್ ಪೈಪ್‌ಗಳನ್ನು ಖರೀದಿ ಮಾಡಬೇಕಾಗಿದ್ದು, ಅದರ ಬದಲಾಗಿ 360 ಕಾಂಪೋಸ್ಟ್ ಪೈಪ್‌ಗಳನ್ನು ಖರೀದಿಸಲಾಗಿದೆ. ಪಿ.ಜಿ. ಟ್ರೇಡರ್ಸ್‌ಗೆ ನೀಡಲಾದ ಒಂದು ಚೆಕ್‌ನ್ನು ರೋಹಿತ್ ಎಂಬವರು ನಗದೀಕರಿಸಿರುತ್ತಾರೆ. ಸದ್ರಿ ರೋಹಿತ್‌ರವರು ಜಿಲ್ಲಾ ಪಂಚಾಯತ್‌ನ ಮಾಜಿ ನೌಕರರಾಗಿರುತ್ತಾರೆ. ಕಾಂಪೋಸ್ಟ್ ಪೈಪ್‌ಗಳನ್ನು ಸ್ಥಳೀಯವಾಗಿ ಕಲ್ಪತರು ಟ್ರೇಡರ್ಸ್, ಸವಣೂರು, ಸಾಯಿ ಸದನ, ರೇಲ್ವೆ ಗೇಟ್ ಹತ್ತಿರ, ಬೆಳ್ಳಾರೆ ರಸ್ತೆ, ಸವಣೂರು/ವಿಕಾಸ್ ಪೈಪ್ಸ್, ಪ್ರೊ. ಗೌತಮ್‌ಚಂದ್‌ಲೋಢ ತಂದೆ ಪನ್ನಾಲಾಲ್‌ಲೋಢ, ಪ್ಲಾಟ್ ನಂ. 314, ಕೈಗಾರಿಕಾವಲಯ, ಬೈಕಂಪಾಡಿ ಮಂಗಳೂರು ಇವರಿಂದ ಖರೀದಿಸಿದ್ದಲ್ಲಿ ಒಂದು ಪೈಪ್‌ಗೆ ರೂ. 230/- ಆಗುತ್ತಿತ್ತು. ಆದರೆ ರೂ.

390/- ಕೊಟ್ಟು ಪಿ.ಜಿ. ಟ್ರೇಡರ್ಸ್ ಎಂಬ ನಕಲಿ ಕಂಪನಿಯಿಂದ ಖರೀದಿಸಿದ ಬಗ್ಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಈ ಬಗ್ಗೆ ಒಟ್ಟು ರೂ. 1,48,122/- ಸಾರ್ವಜನಿಕ ಹಣವನ್ನು ಪಾವತಿಸಿದ್ದು, ಸರ್ಕಾರಕ್ಕೆ ರೂ. 65,322/- ನಷ್ಟವನ್ನುಂಟು ಮಾಡಿರುತ್ತಾರೆ. ಅಲ್ಲದೇ, ಈ ನಷ್ಟದ ಬಾಬ್ತು ರೂ. 13,000/- ನ್ನು ರೋಹಿತ್‌ರವರು ಸರ್ಕಾರಕ್ಕೆ ಮರು ಪಾವತಿ ಮಾಡಿರುತ್ತಾರೆ ಹಾಗೂ 360 ಸಿಮೆಂಟ್ ಪೈಪ್‌ಗಳಿಗೆ ರೂ. 1,48,122/-ನ್ನು ಪಾವತಿಸಿ ಅನುಮೋದನೆಯನ್ನು ಪಡೆದುಕೊಂಡ ಕ್ರಿಯಾಯೋಜನೆಗಿಂತ ರೂ. 8500/- ಹೆಚ್ಚು ಹಣವನ್ನು ಪಾವತಿಸಿ ಕರ್ತವ್ಯ ಲೋಪವೆಸಗಿರುತ್ತಾರೆ. ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆಕ್ಟ್ ಪ್ರಕಾರ ಒಂದು ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಕಾಂಪೋಸ್ಟ್ ಪೈಪ್‌ಗಳನ್ನು ಖರೀದಿಸುವ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡಬೇಕಾಗಿತ್ತು ಮತ್ತು ಟೆಂಡರನ್ನು ಕರೆಯಬೇಕಾಗಿತ್ತು. ಆದರೆ ಯಾವುದೇ ಟೆಂಡರ್ ಯಾ ಪ್ರಕಟಣೆಗಳನ್ನು ಕುಟ್ರುಪ್ಪಾಡಿ ಗ್ರಾಮ ಪಂಚಾಯತ್‌ನ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಕರೆದಿರುವುದಿಲ್ಲ. ಆರೋಪಿ ರೋಹಿತ್ ಎ.ಆರ್. ರವರು ಸೃಷ್ಟಿಸಿದ ಪಿ.ಜಿ. ಟ್ರೇಡರ್ಸ್ ಎಂಬ ನಕಲು ಕೊಟೇಶನ್ ಮತ್ತು ಬಿಲ್‌ನಲ್ಲಿ ನಮೂದಿಸಿರುವ ಟಿನ್ ನಂಬರ್, 29400233756 ನೇಯದ್ದು ನಕಲಿಯಾಗಿದ್ದು, ಸದ್ರಿ ಟಿನ್ ನಂಬರ್ ಸುಂದ್ರು ಮಾರ್ಕೇಟಿಂಗ್ ಸರ್ವಿಸಸ್, ಕುವೆಂಪುನಗರ, ಮೈಸೂರು ಎಂಬ ಹೆಸರಿನ ವ್ಯಾಪಾರ ಸಂಸ್ಥೆಯದ್ದಾಗಿರುತ್ತದೆ ಎಂಬುದಾಗಿ ತನಿಖೆಯಿಂದ ದೃಡಪಟ್ಟಿರುತ್ತದೆ. ಪೈಪ್‌ಗಳನ್ನು ಖರೀದಿಸಿದ ಬಗ್ಗೆ ಪಿ.ಜಿ. ಟ್ರೇಡರ್ಸ್‌ನವರಿಗೆ ಚೆಕ್ ನೀಡುವಾಗ ಕ್ರಾಸ್ ಚೆಕ್ ಮೂಲಕ ಅಥವಾ ಆರ್.ಟಿ.ಜಿ.ಎಸ್. ಮೂಲಕ ಹಣವನ್ನು ಪಾವತಿಸಬೇಕಾಗಿತ್ತು. ಪ್ರಕರಣದ ತನಿಖೆಯ ಸಮಯ ಪಿ.ಜಿ. ಟ್ರೇಡರ್ಸ್ ಎಂಬ ಅಸಲಿ ಸಂಸ್ಥೆಯು ಚೇತನ್ ಕುಮಾರ್ ಪಿ.ಜಿ. ಎಂಬವರ ಹೆಸರಿನಲ್ಲಿ ಸುಳ್ಯ ತಾಲ್ಲೂಕು, ಕೊಲ್ಲಮೊಗ್ರು ಎಂಬಲ್ಲಿಯ ಅಡಿಕೆ ಮತ್ತು ತೆಂಗು ವ್ಯಾಪಾರದ ಸಂಸ್ಥೆಯಾಗಿರುತ್ತದೆ. ಹಣ ದುರುಪಯೋಗ ಮಾಡುವ ಉದ್ದೇಶದಿಂದ ಮತ್ತು ಪಂಚಾಯತ್‌ನ ಅಕ್ಕಪಕ್ಕದ ಪಂಚಾಯತ್‌ಗಳಲ್ಲಿ ಸ್ಥಳೀಯವಾಗಿ ಕಡಿಮೆ ಬೆಲೆಗೆ ಪೈಪ್‌ಗಳನ್ನು ಖರೀದಿಸಿದ್ದು, ಸುಳ್ಳು ಕೊಟೇಷನ್‌ನ್ನು ಅಂಗೀಕರಿಸಿ ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಎಂಬುವುದು ದಾಖಲೆಗಳಿಂದ ಮತ್ತು ಸಾಕ್ಷಿ ಹೇಳಿಕೆಗಳಿಂದ ತನಿಖಾ ವರದಿಯ ದಾಖಲೆಗಳಿಂದ ಮೂಡಿ ಬಂದಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಕುಟ್ರುಪ್ಪಾಡಿ ಗ್ರಾಮ ಪಂಚಾಯತ್‌ನ ನಿಧಿ -1 ರಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಡಿಯಲ್ಲಿ ರೂ. 1,39,622/-

ಮೊತ್ತವಾಗಿದ್ದು ಅದು 1,00,000/- ರೂ.ಗಳಿಗಿಂತ ಹೆಚ್ಚಿನ ಮೊತ್ತ ಇರುವ ಕಾರಣ ಇ-ಟೆಂಡರ್ ಮೂಲಕ ಕೊಟೇಷನ್ ಪಡೆಯಬೇಕಾಗಿದ್ದು, ಸದರಿ ನಿಯಮವನ್ನು ಪಾಲಿಸದೆ ಲ್ಯಾಪ್‌ಟಾಪ್ ನಲ್ಲಿ ತಿರುಚಿಸಿದ ನಕಲಿ ಕೊಟೇಷನ್ ಮತ್ತು ಬಿಲ್ಲುಗಳನ್ನು ಅಸ್ತಿತ್ವದಲ್ಲಿ ಇಲ್ಲದ ಪಿ. ಜಿ. ಟ್ರೇಡರ್ಸ್, ಕುವೆಂಪು ನಗರ, ಮೈಸೂರು ಇವರಿಂದ ಕಾಂಪೋಸ್ಟ್ ಪೈಪ್‌ಗಳನ್ನು ಪಡೆದಂತೆ ತೋರಿಸಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ತನಿಖೆಯ ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಕಂಡುಬರುತ್ತದೆ.

4) ತನಿಖಾಧಿಕಾರಿಗಳು ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಂಗ್ರಹಿಸಿದ್ದಲ್ಲದೆ ಜಪ್ತಿ ಮಾಡಿರುತ್ತಾರೆ. ಹಾಗೂ ಸಾಕ್ಷಿದಾರರ ವಿಚಾರಣೆ ಮಾಡಿರುತ್ತಾರೆ.

5) 1 ಮತ್ತು 2 ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಸಮಜಾಯಿಷಿಗಳನ್ನು ಕೇಳಲಾಗಿ ಸದರಿಯವರು ದಿ: 30/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳು ಏಕ ರೂಪದಲ್ಲಿ ಸಲ್ಲಿಸಿದ್ದು "ದಕ್ಷಿಣ ಕನ್ನಡ ಜಿಲ್ಲೆ, ನೆರವು ಘಟಕದ ಸಂಯೋಜನಾಧಿಕಾರಿಗಳಾದ ಶ್ರೀ ರೋಹಿತ್ ಎ.ಆರ್. ಮತ್ತು ಶ್ರೀಮತಿ ಮಂಜುಳಾ ಹಾಗೂ ಶ್ರೀಮತಿ ವಿದ್ಯಾ, ಕಾರ್ಯನಿರ್ವಹಣಾಧಿಕಾರಿಗಳು, ಸದರಿ ಮೂವರು ಅಗ್ರ ಪಂಕ್ತಿಯ ಅಧಿಕಾರಿಗಳ ಆದೇಶ ಪಾಲನೆ ಮಾಡಬೇಕಾದ ಹಿನ್ನೆಲೆಯಲ್ಲಿ ಸ್ವಲ್ಪ ಲೋಪವಾಗಿರುತ್ತದೆ. ಕಾಂಪೋಸ್ಟ್ ಪೈಪ್ ಖರೀದಿ ವಿಚಾರದಲ್ಲಿ ತನಿಖಾಧಿಕಾರಿಗಳು ಅವರನ್ನು ವಿಚಾರಣೆ ಮಾಡಿದಾಗ ಮೇಲೆ ಹೇಳಿದ ಸತ್ಯ ಸಂಗತಿಗಳನ್ನು ತನಿಖಾಧಿಕಾರಿಗೆ ತಿಳಿಸಿರುವುದಾಗಿ ಹಾಗೂ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ವಿದ್ಯಾ ಹಾಗೂ ಜಿಲ್ಲಾ ನೆರವು ಘಟಕದ ಸಂಯೋಜಕರಾದ ಶ್ರೀಮತಿ ಮಂಜುಳಾರವರ ಆದೇಶದ ಮೇರೆಗೆ ಬೇರೆ ಪಂಚಾಯತ್‌ಗಳಂತೆ ಎದುರುದಾರರು ಕೂಡಾ ಸದ್ರಿ ರೋಹಿತ್ ಎ.ಆರ್. ರವರು ನೀಡಿದ ದರಪಟ್ಟಿಯಂತೆ ಪೈಪ್ ಖರೀದಿಸಿರುವುದಾಗಿ ನಾನು ತನಿಖಾಧಿಕಾರಿಯಲ್ಲಿ ಸ್ಪಷ್ಟವಾಗಿ ತಿಳಿಸಿದರೂ, ಶ್ರೀಮತಿ ವಿದ್ಯಾ ಮತ್ತು ಶ್ರೀಮತಿ ಮಂಜುಳಾರವರು ಜಿಲ್ಲಾ ಪಂಚಾಯತ್‌ನ ಅಧಿಕಾರಿಗಳಾದ ಹಿನ್ನೆಲೆಯಲ್ಲಿ ಅವರ ಪ್ರಭಾವ ಬಳಸಿ ಅವರು

ಪ್ರಕರಣದಿಂದ ನುಣುಚಿಕೊಂಡು ಅಮಾಯಕರಾದ ಎದುರುದಾರರ ಮೇಲೆ ಸುಳ್ಳು ದೋಷಾರೋಪಣೆ ಮಾಡಿರುವುದಾಗಿದೆ" ಎಂದು ತಮ್ಮ ಸಮಜಾಯಿಷಿಯಲ್ಲಿ ಉಲ್ಲೇಖಿಸಿರುತ್ತಾರೆ. ಈ ಪ್ರಕರಣದಿಂದ ನಮ್ಮನ್ನು ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ. ಈ ಪ್ರಕರಣದಲ್ಲಿ ಮೇಲಾಧಿಕಾರಿಗಳ ಒತ್ತಡ ಇದ್ದ ಕಾರಣ ಅವರ ಆದೇಶಗಳನ್ನು ಪಾಲಿಸಲೇ ಬೇಕಾದ ಅನಿವಾರ್ಯತೆಯ ಹಿನ್ನೆಲೆಯಲ್ಲಿ ಸ್ವಲ್ಪ ಲೋಪವಾಗಿದೆ ಎಂದು ಎದುರುದಾರರು ಹೇಳಿಕೊಂಡಿದ್ದರೂ ಸಹಾ, ಮೇಲಾಧಿಕಾರಿಗಳು ಒತ್ತಡ ಹೇರಿರುವ ಬಗ್ಗೆ ಎದುರುದಾರರ ಹೇಳಿಕೆಯಲ್ಲದೆ ಬೇರೆ ಆಧಾರ ಒದಗಿಸಿರುವುದಿಲ್ಲ. ಸರಕಾರಿ/ಸಾರ್ವಜನಿಕ ಸೇವೆಯಲ್ಲಿ ಮೇಲಾಧಿಕಾರಿಗಳ ಮೂಲಕ ಒತ್ತಡವಿದ್ದರೂ ಸಹಾ ಯಾವುದೇ ನೌಕರರು, ಅಧಿಕಾರಿಗಳು ಕಾನೂನು ಬಾಹೀರವಾಗಿ ಸಾರ್ವಜನಿಕ ಹಣವನ್ನು ಉಪಯೋಗಿಸಲು ಅವಕಾಶವಿಲ್ಲ. ಆದುದರಿಂದ ಎದುರುದಾರರ ವಿವರಣೆಯನ್ನು ಈ ಹಂತದಲ್ಲಿ ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

6) ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ 1 ನೇ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಅಪರಾಧಿತ ನಂಬಿಕೆ ದ್ರೋಹವನ್ನು ಎಸಗಿ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಅಧಿಕಾರ ದುರುಪಯೋಗ ಮಾಡಿ ಸರ್ಕಾರದ ಯೋಜನೆಯ ಸಾರ್ವಜನಿಕ ಹಣ ದುರುಪಯೋಗಪಡಿಸಿ ಅಕ್ರಮ ಲಾಭ ಮಾಡಿಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ 1 ನೇ ಎದುರುದಾರರು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

7) ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ 2ನೇ ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೇ, ಸಾರ್ವಜನಿಕ ಸೇವಕನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಅಪರಾಧಿತ ನಂಬಿಕೆ ದ್ರೋಹವನ್ನು ಎಸಗಿ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಅಧಿಕಾರ ದುರುಪಯೋಗ ಮಾಡಿ ಸರ್ಕಾರದ ಯೋಜನೆಯ ಸಾರ್ವಜನಿಕ ಹಣ ದುರುಪಯೋಗಪಡಿಸಿ ಅಕ್ರಮ ಲಾಭ ಮಾಡಿಕೊಂಡಿರುವುದರಿಂದ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ಕಲಂ 43–ಎ (1) (i) ರನ್ವಯ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಕಾರಣದಿಂದಲೇ 2ನೇ ಎದುರುದಾರರನ್ನು ಕುಟ್ರುಪ್ಪಾಡಿ ಗ್ರಾಮ ಪಂಚಾಯ್ತಿಯ ಸದಸ್ಯತ್ವ ಸ್ಥಾನದಿಂದ ದಿನಾಂಕ 17/10/2018 ರಂದು ತೆಗೆದು ಹಾಕಲಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43–ಎ(2)ರನ್ವಯ, ಪಂಚಾಯ್ತಿಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯರನ್ನು ದುರ್ನಡತೆಯ ಆಧಾರದಲ್ಲಿ ಸದಸ್ಯತ್ವದಿಂದ ತೆಗೆದು ಹಾಕಿದಲ್ಲಿ ಅಂತಹ ವ್ಯಕ್ತಿಯನ್ನು ಮುಂದಿನ 6 ವರ್ಷಗಳ ಅವಧಿಗೆ ಪಂಚಾಯತ್ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸಲು ಅನರ್ಹಗೊಳಿಸಬಹುದಾಗಿದೆ.

8) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಮತ್ತು ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ 1 ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i ರಿಂದ iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9) ಆದುದರಿಂದ 1 ನೇ ಎದುರುದಾರರ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

10) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43-ಎ (1) (i) ರನ್ವಯ 2ನೇ ಎದುರುದಾರರು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43-ಎ (2)ರನ್ವಯ ಎದುರುದಾರರನ್ನು 6 ವರ್ಷಗಳ ಕಾಲ ಪಂಚಾಯತ್ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸದಂತೆ ನಿರ್ಬಂಧಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

P. Vishwanatha Shetty
14/1/2022

(ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ)
ಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.